ಪ್ರಜಾವಾಣಿ ಬುಧವಾರ • ಸೆಪ್ಟೆಂಬರ್ 28, 2016



ಸಾಗರದಲ್ಲಿ 'ಅಡಿಕೆ ಮಾರುಕಟ್ಟೆ ಹಾಗೂ ಬೆಲೆ' ಎಂಬ ವಿಷಯದ ಕುರಿತು ಮಂಗಳವಾರ ನಡೆದ ಸಂವಾದ ಕಾರ್ಯಕ್ರಮದಲ್ಲಿ ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಮಾತನಾಡಿದರು.

### ಸಾಗರ: ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಅಭಿಮತ

# ಅಡಿಕೆ ಮಾರುಕಟ್ಟೆಗೆ ಷೇರು ಸ್ವರೂಪ

ಪ್ರಜಾವಾಣಿ ವಾರ್ತೆ

ಸಾಗರ: ಮಾರುಕಟ್ಟೆಯಲ್ಲಿ ಅಡಿಕೆಯ ಬೆಲೆ ಯಾವಾಗ ಮತ್ತು ಹೇಗೆ ಇಳಿಯುತ್ತದೆ ಮತ್ತು ಏರುತ್ತದೆ ಎನ್ನುವುದನ್ನು ಅಂದಾಜು ಮಾಡುವುದೇ ಕಷ್ಟವಾಗಿದೆ. ಅಡಿಕೆ ಮಾರುಕಟ್ಟೆ ಷೇರು ಮಾರುಕಟ್ಟೆಯ ಸ್ವರೂಪ ತಾಳಿದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಹೇಳಿದರು.

ಇಲ್ಲಿನ ಬ್ರಾಸಂ ಸಭಾಂಗಣದಲ್ಲಿ ತೋಟಗಾರಿಕೆ, ಕೃಷಿ ಇಲಾಖೆ, ಪ್ರಾಂತ್ಯ ಅಡಿಕೆ ಬೆಳೆಗಾರರ ಸಂಘ, ಪ್ರಾಂತ್ಯ ಅಡಿಕೆ ಬೆಳೆಗಾರರ ಹಿತರಕ್ಷಣಾ ಆಂದೋಲನ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ 'ಅಡಿಕೆ ಮಾರುಕಟ್ಟೆ ಹಾಗೂ ಬೆಲೆ' ವಿಷಯದ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವಿದೇಶದಿಂದ ಅಡಿಕೆ ಆಮದಾಗುತ್ತಿರುವುದು ಅಡಿಕೆ ಬೆಲೆ ಕುಸಿತಕ್ಕೆ ಕಾರಣ ಎನ್ನುವುದು ನಿಜವಾದರೂ ಸಂಪೂರ್ಣವಾಗಿ ಇದೇ ಸತ್ಯ ಎನ್ನಲಾಗದು. ಏಕೆಂದರೆ ಇತರ ಬೆಳೆಗಳು ಕೂಡ ವಿದೇಶದಿಂದ ಆಮದಾಗುತ್ತಿವೆ. ಪೂರೈಕೆ, ಉತ್ಪಾದನೆ, ಬೇಡಿಕೆ ಈ ಸಿದ್ಧಾಂತವನ್ನು ಮೀರಿ ಅಡಿಕೆ ಮಾರುಕಟ್ಟೆಯಲ್ಲಿ ಏರಿಳಿತ ಆಗುತ್ತಿದೆ. ಈ ಹಿನ್ನೆಲೆಯಲ್ಲಿ ಅಡಿಕೆ ಮಾರುಕಟ್ಟೆಯ ಸಮಗ್ರ ವಿಶ್ಲೇಷಣೆ ಕರಾರುವಾಕ್ಕಾಗಿ ನಡೆಯಬೇಕಿದೆ ಎಂದರು.

ಇನ್ನು ಮುಂದೆ ಅಡಿಕೆ ಬೆಳೆಗಾರರು ಅಡಿಕೆಯಿಂದ ಶೇ 50ರಷ್ಟು ಮಾತ್ರ ಆದಾಯ ನಿರೀಕ್ಷಿಸಬಹುದು. ಉಳಿದ ಆದಾಯವನ್ನು ಉಪ ಬೆಳೆಗಳ ಮೂಲಕ ಗಳಿಸಲು ಪ್ರಯತ್ನಿಸಬೇಕು. ಅಡಿಕೆ ಮಂಡಳಿ ರಚನೆಯಾದರೆ ಬೆಳೆಗಾರರ ಸಮಸ್ಯೆಗಳಿಗೆ ಒಂದಿಷ್ಟು ಪರಿಹಾರ ದೊರಕಬಹುದು. ಹಾಗೆಯೇ ಅಡಿಕೆ ಮಹಾಮಂಡಲದ ಸಂಘಟನೆ ಗಟ್ಟಿಗೊಳ್ಳಬೇಕು ಎಂದು ಹೇಳಿದರು.

**ಮುಖ್ಯಾಂಶಗಳು**

- ಅಡಿಕೆ ಬೆಲೆ ಏರಿಳಿತಕ್ಕೆ ಕಾರಣ ನಿಗೂಢ
- ಉಪಬೆಳೆ ಬೆಳೆಯುವುದು ಅನಿವಾರ್ಯ
- ಅಡಿಕೆ ಮಂಡಳಿ ಸ್ಥಾಪನೆಗೆ ಪಕ್ಷಾತೀತ ಒತ್ತಾಯ ಅಗತ್ಯ

ತಾಲ್ಲೂಕು ಪಂಚಾಯ್ತಿ ಅಧ್ಯಕ್ಷ ಮಲ್ಲಿಕಾರ್ಜುನ ಹಕ್ರೆ ಮಾತನಾಡಿ, 'ಮಲೆನಾಡು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಬಿಳಿ ಚಾಲಿ ಅಡಿಕೆಗೆ ಕ್ಯಾಂಪ್ಕೋ ಸಂಸ್ಥೆ ದರ ತಾರತಮ್ಯ ಮಾಡುತ್ತಿರುವುದನ್ನು ನಿಲ್ಲಿಸಬೇಕು. ವಿದೇಶದಿಂದ ಆಮದಾಗುವ ಅಡಿಕೆಗೆ ಹೆಚ್ಚಿನ ದರದ ಸುಂಕ ವಿಧಿಸಬೇಕು. ಪಕ್ಷಾತೀತವಾಗಿ ಬೆಳೆಗಾರರು ಸಂಘಟಿತರಾದರೆ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದರು.

ಸಂವಾದದಲ್ಲಿ ಪಾಲ್ಗೊಂಡಿದ್ದ ಆಪ್ಕೋಸ್‌ನ ನಿರ್ದೇಶಕ ಕೆ.ಎಂ. ಸೂರ್ಯನಾರಾಯಣ ಮಾತನಾಡಿ, 'ಬೆಂಬಲ ಬೆಲೆ ಘೋಷಣೆಯಾಗುತ್ತದೆ ಎನ್ನುವ ಕಾರಣಕ್ಕೆ ಬೆಳೆಗಾರರು ಅಡಿಕೆಯನ್ನು ಇಟ್ಟುಕೊಂಡು ಕಾಯುತ್ತಿದ್ದಾರೆ. ದೊಡ್ಡ ವ್ಯಾಪಾರಸ್ಥರು ಅಡಿಕೆ ಮಾರುಕಟ್ಟೆಯಲ್ಲಿ 'ಕುದುರೆ ವ್ಯಾಪಾರ' ನಡೆಸುತ್ತಿರುವುದೇ ದರದ ಏರಿಳಿತಕ್ಕೆ ಕಾರಣವಾಗಿದೆ ಎಂದು ಹೇಳಿದರು.

ಪ್ರಕಾಶ್ ಕಮ್ಮರಡಿ ಪ್ರತಿಕ್ರಿಯಿಸಿ, 'ಬೆಂಬಲ ಬೆಲೆ ಘೋಷಿಸುವಂತೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದೊಂದಿಗೆ ನಿರಂತರವಾಗಿ ಪತ್ರ ವ್ಯವಹಾರ ನಡೆಸುತ್ತಿದೆ. 'ಕುದುರೆ ವ್ಯಾಪಾರ' ನಿಯಂತ್ರಣದತ್ತ ಗಮನ ಹರಿಸಬೇಕಿದೆ' ಎಂದರು.

ಸಹಕಾರಿ ಮುಖಂಡ ಎಂ. ಹರನಾಥ ರಾವ್ ಮಾತನಾಡಿ, 'ಮಾರುಕಟ್ಟೆಯಲ್ಲಿ ಶೇ 50ಕ್ಕಿಂತ ಹೆಚ್ಚಿನ ಪ್ರಮಾಣದ ಅಡಿಕೆಯನ್ನು ಬೆಳೆಗಾರರಿಂದ ಖರೀದಿಸಬೇಕು ಎನ್ನುವ ಉದ್ದೇಶದಿಂದಲೇ ಕ್ಯಾಂಪ್ಕೋ ಸಂಸ್ಥೆ ಹುಟ್ಟಿದ್ದು. ಆದರೆ ಅದು ತನ್ನ ಪ್ರಾಥಮಿಕ ಜವಾಬ್ದಾರಿಯನ್ನು ಮರೆತಿದೆ ಎಂದು ದೂರಿದರು.

ವಕೀಲ ಕೆ.ಎನ್.ಶ್ರೀಧರ್, 'ಸುಪ್ರೀಂ ಕೋರ್ಟ್‌ನಲ್ಲಿ ಅಡಿಕೆ ನಿಷೇಧದ ಕುರಿತು ಇರುವ ಪ್ರಕರಣವನ್ನು ಗಂಭೀರವಾಗಿ ಸ್ವೀಕರಿಸಬೇಕಿದೆ. ಅಡಿಕೆ ಸೇವನೆ ಆರೋಗ್ಯಕ್ಕೆ ಹಾನಿಕಾರಕ ಎಂದು ಕೋರ್ಟ್ ತೀರ್ಪು ನೀಡಿದರೆ ಅಡಿಕೆ ಕೃಷಿಗೆ ಕಂಟಕ ಕಾದಿದೆ' ಎಂದರು.

ಪ್ರಾಂತ್ಯ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷ ಬಿ.ಆರ್.ಜಯಂತ್, ತಾ.ಪಂ. ಉಪಾಧ್ಯಕ್ಷ ಪರಶುರಾಮ ಕೆ.ಎಚ್., ಸದಸ್ಯ ಅಶೋಕ್ ಬರದವಳ್ಳಿ, ಜಿ.ಪಂ. ಸದಸ್ಯ ರಾಜಶೇಖರ ಗಾಳಿಪುರ, ಆಪ್ಕೋಸ್ ಅಧ್ಯಕ್ಷ ಬಿ.ಎ. ಇಂದೂಧರ ಗೌಡ, ಟಿ.ಎ.ಪಿ.ಎಂ. ಸಿ.ಎಸ್.ಅಧ್ಯಕ್ಷ ವಿರೇಶ್ ಬರೂರು, ತೋಟಗಾರ್ಸ್ ಅಧ್ಯಕ್ಷ ಕೆ.ಸಿ.ದೇವಪ್ಪ, ಸಿ.ಎನ್. ಸುಬ್ರಾವ್, ಕೃಷಿ ಇಲಾಖೆಯ ಅಶೋಕ್, ತೋಟಗಾರಿಕಾ ಇಲಾಖೆಯ ಡಿ.ಕೆ. ತಿಮ್ಮಪ್ಪ, ತಹಶೀಲ್ದಾರ್ ಎಸ್.ಟಿ. ಧರ್ಮೋಜಿ ರಾವ್ ಇದ್ದರು.